ಈ) ಪ್ರಶ್ನೆ 'ಆ' ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ವಿಷಯ : ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳನ್ನು ಬೇಗ ಮುಗಿಸಲು ಒತ್ತಾಯ.

Q : 368

ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) ಮತ್ತು ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಕಾವೇರಿ ಜಲಾನಯನ ಪ್ರದೇಶದ ವಿವಿಧ ಯೋಜನೆಗಳಿಗೆ ಎಷ್ಟು ಹಣ ಆಯವ್ಯಯದಲ್ಲಿ ಇಡಲಾಗಿತ್ತು ಹಾಗೂ ಎಷ್ಟು ಹಣ ಖರ್ಚಾಗಿದೆ;

ಆ) ಈ ಎಲ್ಲಾ ಯೋಜನೆಗಳನ್ನು ಮುಗಿಸಲು ಬೇಕಾಗಿರುವ ಒಟ್ಟು ಹಣ ಎಷ್ಟು ಹಾಗೂ ಅವುಗಳನ್ನು ಯಾವಾಗ ಮುಗಿಸಲಾಗುವುದು;

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ)

ಅನುದಾನ		ಖರ್ಚು (ಕೋಟಿ ರೂ. ಗಳಲ್ಲಿ)
1989-90	119.86	92.11
1990-91	124.44	103.70
1991-92	150.32	147.70
ಒಟ್ಟು	394.62	343.51

ಆ) ಪ್ರಸ್ತುತ ದರದ ಪ್ರಕಾರ 1700 ಕೋಟಿ ರೂ.ಗಳು. ಹಣದ ಲಭ್ಯತೆಯನ್ನು ಅವಲಂಬಿಸಿ, ಈ ಯೋಜನೆಗಳನ್ನು ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ವಿಷಯ : ಮಂಗಳೂರು ನಗರದ ವಿದ್ಯುತ್ ಪೂರೈಕೆಯಲ್ಲಿನ ಕೊರತೆಯ ನಿವಾರಣೆ.

Q : 783

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ನಗರದ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಲು ಹೆಚ್ಚುವರಿ ಸಬ್‌ಸ್ಟೇಷನ್‌ಗಳನ್ನು ಶೀಘ್ರವೇ ನಿರ್ಮಿಸಲಾಗುವುದೇ?

ಆ) ಅದೇ ರೀತಿ ಉಳ್ಳಾಲ ಕ್ಷೇತ್ರದ ವಿದ್ಯುತ್ ತೊಂದರೆ ನೀಗಿಸಲು ಹೆಚ್ಚುವರಿ ಒಂದು ಸಬ್ ಸ್ಟೇಷನ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು?